ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1283(1340)
ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)
ಉತ್ತರಿಸಬೇಕಾಧ ಸಚಿವರು ಶ್ರೀ ಜೆ ಟಿ ದೇವೇಗೌಡ
(ಸಹಕಾರ ಸಚಿವರು)

ಆ) ಧಾರವಾಡ ಕೆಸಿಸಿ ಬ್ಯಾಂಕ್‌ನ ಪುನಶ್ಚೇತನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

1 ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕಾತಿ ಮಾಡಲಾಗಿದೆ

2 ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ಸಭೆಗಳನ್ನು ಆಗಾಗ್ಗೆ ಜರುಗಿಸಲಾಗಿದೆ

3 ಸಾಲ ವಸೂಲಾತಿಗಾಗಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದೆ

4 ಬ್ಯಾಂಕಿನ ಸಾಲ ವಸೂಲಾತಿಗಾಗಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿರುತ್ತದೆ

5 ಬ್ಯಾಂಕಿನ ವೆಚ್ಚವನ್ನು ತಗ್ಗಿಸಲು ಅಶಕ್ತವಾಗಿದ್ದ ಸುಮಾರು 50 ಶಾಖೆಗಳನ್ನು ಮುಚ್ಚಲಾಗಿದೆ

6 ಸರ್ಕಾರವು ಕೆಸಿಸಿ ಬ್ಯಾಂಕ್ ನ ಧಾರವಾಡ ಇದರ ಪುನಶ್ಚೇತನಕ್ಕೆ ವಿಶೇಷ ಪ್ಯಾಕೇಜಿನಲ್ಲಿ ದಿನಾಂಕ 30 06 2003ಕ್ಕೆ ಬಾಕಿಯಿದ್ದು, ದಿನಾಂಕ 31 03 2004ರೊಳಗಾಗಿ ಪಾವತಿಸಲಾದ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿದೆ ಮನ್ನಾ ಮಾಡಲಾದ ಈ ಕೃಷಿ ಸಾಲದ ಮೇಲಿನ ಬಡ್ಡಿ ಮೊತ್ತವು ರೂ 73 46 ಕೋಟಿ ಆಗಿರುತ್ತದೆ ಸರ್ಕಾರವು ಹೊರಡಿಸಿರುವ ಆದೇಶದಲ್ಲಿ ಬಡ್ಡಿ ಮನ್ನಾ ಮಾಡಲಾದ ಬಾಬ್ತು ನಷ್ಟವನ್ನು ರೂ 50 00 ಕೋಟಿಗೆ ಸೀಮಿತಗೊಳಿಸಿ ಸರ್ಕಾರ ಅಪೆಕ್ಸ್ ಬ್ಯಾಂಕು ಮತ್ತು ಕೆಸಿಸಿ ಬ್ಯಾಂಕ್ ನ ಧಾರವಾಡ ಅನುಕ್ರಮವಾಗಿ ಶೇಕಡ 50 25 25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಲಾಗಿದೆ ಇದರ ಪ್ರಕಾರ ಸರ್ಕಾರದ ವಂತಿಕೆ ರೂ 25 00 ಕೋಟಿ ಆಗಿದ್ದು ಸರ್ಕಾರವು ರೂ 25 00 ಕೋಟಿಯನ್ನು ಬಿಡುಗಡೆ ಮಾಡಿದೆ ಹಾಗೂ ಅಪೆಕ್ಸ್ ಬ್ಯಾಂಕ್ 12 50 ಕೋಟಿಯನ್ನು ಬಿಡುಗಡೆ ಮಾಡಿದೆ

7 ಅಪೆಕ್ಸ್ ಬ್ಯಾಂಕಿನಿಂದ ಅಲ್ಪಾವಧಿ ಪತ್ತಿನ ಮಿತಿ ರೂ 73 00 ಕೋಟಿಯನ್ನು ಮಂಜೂರು ಮಾಡಲಾಗಿದೆ

8 ಅಪೆಕ್ಸ್ ಬ್ಯಾಂಕಿನಿಂದ ರೂ 16 52 ಕೋಟಿಗಳನ್ನು ಪಟ್ಟಣ ಬ್ಯಾಂಕುಗಳಿಗಾಗಿ ಸಾಲದ ರೂಪದಲ್ಲಿ ಮಂಜೂರು ಮಾಡಲಾಗಿದೆ

9 ಪಟ್ಟಣ ಬ್ಯಾಂಕುಗಳಿಗೆ ರೂ 26 00 ಕೋಟಿ ರೇವು ಹಣ ವಾಪಸ್ಸು ಮಾಡಲಾಗಿದೆ

10 ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ 1949ರ ಪ್ರಕರಣ 11(1)ರಿಂದ ವಿನಾಯಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ 31 03 2004 ರವರೆಗೆ ನೀಡಿದ್ದು ದಿನಾಂಕ 31 03 2007 ರವರೆಗೆ ವಿಸ್ತರಿಸುವ ಬಗ್ಗೆ ಕ್ರಮವಿಡಲಾಗಿದೆ 11 ಮುಂಗಾರು 2002ರ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಬ್ಯಾಂಕಿಗೆ ಇದುವರಗೆ ರೂ 3 18 ಕೋಟಿ ಬಿಡುಗಡೆಗೊಳಿಸಲಾಗಿದೆ

12 ದಿನಾಂಕ 01 04 2004ರಿಂದ ವಿತರಿಸಿದ ಅಲ್ಪಾವಧಿ ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳನ್ನು ಶೇಕಡ 6ರ ಬಡ್ಡಿ ದರದಲ್ಲಿ ನೀಡಲು ತೀರ್ಮಾನಿಸಿದ್ದು ಈ ಸಾಲಗಳ ಮೇಲಿನ ಶೇಕಡ 5 5ರಷ್ಟು ಬಡ್ಡಿಯನ್ನು ಸರ್ಕಾರವು 6ರ ಬಡ್ಡಿ ದರದಲ್ಲಿ ನೀಡಲು ತೀರ್ಮಾನಿಸಿದ್ದು ಈ ಸಾಲಗಳ ಮೇಲಿನ ಶೇಕಡ 5 5ರಷ್ಟು ಬಡ್ಡಿಯನ್ನು ಸರ್ಕಾರವು ಭರಿಸಿಕೊಡುವ ಯೋಜನೆಯಡಿಯಲ್ಲಿ ಈ ಬ್ಯಾಂಕಿಗೆ ಈಗಾಗಲೇ 2004–05ನೇ ಸಾಲಿನಲ್ಲಿ ವಿತರಿಸಿರುವ ಕೃಷಿ ಸಾಲಗಳ ಮೇಲಿನ ಬಡ್ಡಿ ಬಾಬ್ತು ರೂ 1 21 ಕೋಟಿಯನ್ನು ಬ್ಯಾಂಕಿಗೆ ಬಿಡುಗಡೆ ಮಾಡಲಾಗಿದೆ 2005–06ನೇ ಸಾಲಿಗೆ ಸಂಬಂಧಪಟ್ಟಂತೆ ರೂ 466 67 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

13 ರೇವಣಿದಾರರಿಗೆ ರೂ 24 05 ಕೋಟಿ ರೇವಣಿ ಹಣ ವಾಪಸ್ಸು ಮಾಡಲಾಗಿದೆ (ಏಪ್ರಿಲ್ 2006ರಿಂದ 21 03 2007ರವರೆಗೆ)

ಆ) ಕೆಸಿಸಿ ಬ್ಯಾಂಕ್‌ಗೆ ಬಡ್ಡಿ ಮನ್ನಾ ಹಾಗೂ ಇತರೆ ಯೋಜನೆಯಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು? ಇನ್ನೂ ಬಿಡುಗಡೆ ಮಾಡಬೇಕಾಗಿರುವ ಅನುದಾನ ಎಷ್ಟು? ಇದರಿಂದ ಕೆಸಿಸಿ ಬ್ಯಾಂಕ್‌ಗೆ ಆದ ಹಾನಿ ಎಷ್ಟು? (ವಿವರ ನೀಡುವುದು) ಕೆಸಿಸಿ ಬ್ಯಾಂಕ್‌ನ ಪುನಶ್ಚೇತನಕ್ಕಾಗಿ ಆರ್ಥಿಕ ನೆರವು ಕೋರಿ ಬ್ಯಾಂಕು ಪ್ರಸ್ತಾವನೆ ಸಲ್ಲಿಸಿದೆಯೆ?(ವಿವರ ನೀಡುವುದು)

1 2003–04ನೇ ಸಾಲಿನಲ್ಲಿ ಕೆಸಿಸಿ ಬ್ಯಾಂಕ್ ನಿ ಧಾರವಾಡ ಇದರ ಪುನಶ್ಚೇತನ ಸಲುವಾಗಿ ಘೋಷಿಸಿದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಸರ್ಕಾರವು ರೂ 25 00 ಕೋಟಿಯನ್ನು ಹಾಗೂ ಅಪೆಕ್ಸ್ ಬ್ಯಾಂಕ್ ರೂ 12 50 ಕೋಟಿಯನ್ನು ಬಿಡುಗಡೆ ಮಾಡಿದೆ

2 2005–06ನೇ ಸಾಲಿನ ಬಡ್ಡಿ ಮತ್ತು ದಂಡದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಕೆಸಿಸಿ ಬ್ಯಾಂಕ್, ಧಾರವಾಡ ಇದರ ಬೇಡಿಕೆಯಂತೆ ರೂ 54 30 ಕೋಟಿಯನ್ನು ಬಿಡುಗಡೆ ಮಾಡಿದೆ ಬಿಡುಗಡೆಗಾಗಿ ಬಾಕಿ ಹಣ ಇರುವುದಿಲ್ಲ

ಹೌದು

1 2003–04ನೇ ಸಾಲಿನ ವಿಶೇಷ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿನ ಒಟ್ಟಾರೆ ಮೊತ್ತ ರೂ 73 45 ಕೋಟಿಯನ್ನು ಸರ್ಕಾರವೇ ಪಾವತಿಸುವ ಬಗ್ಗೆ

2 ಸರ್ಕಾರದಿಂದ ಮಂಜೂರಾಗಿ ಅಪೆಕ್ಸ್ ಬ್ಯಾಂಕಿನಲ್ಲಿ ಜಮಾ ಆಗಿರುವ ಮಾಧ್ಯಮಿಕ ಪರಿವರ್ತಿತ ಸಾಲ ರೂ 504 21 ಲಕ್ಷ ಬಿಡುಗಡೆ ಬಗ್ಗೆ

3 ಕೆಸಿಸಿ ಬ್ಯಾಂಕ್ ನಿ ಧಾರವಾಡ ಇದಕ್ಕೆ ಹೆಚ್ಚುವರಿ ಷೇರು ಬಂಡವಾಳ ರೂ 10 00 ಕೋಟಿ ಮಂಜೂರು ಮಾಡುವ ಬಗ್ಗೆ

4 ಕೆಸಿಸಿ ಬ್ಯಾಂಕ್ ಪಡೆದಿರುವ ಎನ್‌ಒಡಿಸಿ ಸಾಲ ರೂ 39 17 ಲಕ್ಷಗಳನ್ನು ಷೇರು ಅಂತ ಪರಿವರ್ತಿಸುವ ಬಗ್ಗೆ

5 ಪಟ್ಟಣ ಬ್ಯಾಂಕುಗಳ ನಾನ್ ಎಸ್‌ಎಲ್‌ಆರ್/ ಇತರೆ ಸಂಘ ಸಂಸ್ಥೆಗಳ ರೇವು ಮರುಪಾವತಿಸಲು ರೂ 110 00 ಕೋಟಿಗಳ ಬಡ್ಡಿ ರಹಿತ ಸಾಲ ಮಂಜೂರಿಬಗ್ಗೆ

6 ರೂ 62 00 ಕೋಟಿಗಳ ಗ್ಯಾಪ್ ಮೊತ್ತವನ್ನು ಸರ್ಕಾರದಿಂದ ಬಿಡುಗಡೆಗೊಳಿಸಲು ಪ್ರಸ್ತಾವ ಸಲ್ಲಿಸುವ ಬಗ್ಗೆ

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)
ಮೇಲ್ಕಂಡ ಪ್ರಸ್ತಾವಗಳನ್ನು ಸರ್ಕಾರವು ಒಪ್ಪಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1284(1348)**
ಸದಸ್ಯರ ಹೆಸರು	**ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ರಾಜ್ಯದಲ್ಲಿ ಸರ್ಕಾರ ಮಕ್ಕಳ ಅಭಿವೃದ್ಧಿ ಬಗ್ಗೆ ಕೈಗೊಂಡ ಕ್ರಮಗಳೇನು(ವಿವರ ನೀಡುವುದು)?

1 ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 0–6ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ಸೇವೆಗಳನ್ನು ಒದಗಿಸಲಾಗುತ್ತಿದೆ
2 ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿಗಳು
3 ಭಾಗ್ಯಲಕ್ಷ್ಮಿ ಯೋಜನೆ
4 ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು
5 ಬಾಲಭವನ, ವೀರಶಕ್ತಿ ಮತ್ತು ಹಾಜರಾತಿ ಇದ್ಯಾರ್ಥಿ ವೇತನ
6 ಅನಾಥ ಮಕ್ಕಳಿಗೆ ನಿರ್ಗತಿಕ ಮಕ್ಕಳ ಕುಟೀರ
7 ಶಿಶು ಪಾಲನಾ ಕೇಂದ್ರ.
8 ಬೀದಿ ಮಕ್ಕಳಿಗಾಗಿ ಸಮಗ್ರ ಯೋಜನೆ
9 ದುಡಿಯುವ ಮಕ್ಕಳ ಅಗತ್ಯತೆಗಾಗಿ ರಕ್ಷಣೆ ಮತ್ತು ಪಾಲನೆ
10 ಮಹಿಳೆಯರ ಮತ್ತು ಮಕ್ಕಳ ಸಾಗಣೆ ತಡೆಗಟ್ಟಲು ಸ್ವಯಂ ಸೇವಾ ಸಂಸ್ಥೆಗಳಿಗೆ ಭಾರತ ಸರ್ಕಾರದ ಆರ್ಥಿಕ ನೇರವು

ಆ) ರಾಜ್ಯದಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು? ಅದರಲ್ಲಿ ಬಡತನ ರೇಖೆಗಿಂತ ಕೆಳಗಿರುವ ಮಕ್ಕಳ ಸಂಖ್ಯೆ ಎಷ್ಟು? ಇವರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

2001ನೇ ಜನಗಣತಿಯ ಪ್ರಕಾರ ರಾಜ್ಯದಲ್ಲಿ 0–06ವರ್ಷದ ಮಕ್ಕಳ ಸಂಖ್ಯೆ 68,26,168 ಇದ್ದು, ಬಡತನ ರೇಖೆಗಿಂತ ಕೆಳಗಿರುವ 32 27ಲಕ್ಷ ಮಕ್ಕಳನ್ನು ಐ ಸಿ ಡಿ ಎಸ್ ಫಲಾನುಭವಿಗಳಾಗಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ದಾಖಲು ಮಾಡಿಕೊಳ್ಳಲಾಗಿದೆ ಮಕ್ಕಳ ಅಭಿವೃದ್ಧಿಗಾಗಿ ಈ ಕೆಳಕಂಡ ಕ್ರಮಗಳನ್ನು ಮುಖ್ಯವಾಗಿ ಕೈಗೊಳ್ಳಲಾಗಿದೆ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸುವುದು